ಪ್ರಮಾಣ ವಚನ ಭೋದಿಸಿದ ದಿನಾಂಕ :**08.10.2024**

ಪಾಟೀ ಸವಾಲುಃ **2** ನೇ ಎದುರುದಾರರ ಪರಃ

2 ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರುಹಾಜರಾಗಿದ್ದು 2 ನೇ ಎದುರುದಾರರ ಪರ ಸಾಕ್ಷಿಯ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಶ್ರೀ ಎಮ್ ಕೆ **ವಕೀಲರಿಂದಃ** 3 ನೇ ಎದುರುದಾರರ ಪರಃ

ನಿಪಿ-7 ಅಪಘಾತವಾದ ನಂತರ ಪೋಲೀಸರು ನನಗೆ ನೀಡಿದ್ದ ನೋಟೀಸಿಗೆ ನೀಡಿದ್ದ ಉತ್ತರ ಎಂದರೆ ಸರಿ. ಸದರಿ ಉತ್ತರದಲ್ಲಿ ಅಪಘಾತಪಡಿಸಿದ ವಾಹನದ ಮಾಲೀಕ ನಾನು ಎಂದು ತಿಳಿಸಿದ್ದೇನೆ ಎಂದರೆ ಸರಿ. ನಿಪಿ-13 ನನ್ನ ಪರವಾಗಿ ಸಲ್ಲಿಸಿರುವ ವಕಾಲತ್ತು ಎಂದರೆ ಸರಿ. ಅಪಘಾತಪಡಿಸಿದ ವಾಹನವನ್ನು ಬಿಡುಗಡೆಗೊಳಿಸಿಕೊಳ್ಳಲು ನ್ಯಾಯಾಲಯಕ್ಕೆ ನಾನು ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ. ನಿಪಿ-15 ಆರ್.ಸಿ ದಾಖಲೆಯನ್ನು ನಾನು ವಾಹನವನ್ನು ಬಿಡುಗಡೆಗೊಳಿಸಿಕೊಳ್ಳುವ ಕಾಲಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು ಎಂದರೆ ಸರಿ. ಅಪಘಾತಪಡಿಸಿದ ವಾಹನವನ್ನು ನನ್ನ ವಶಕ್ಕೆ ನೀಡಬೇಕು ಎಂದು ನಿಪಿ-18 ರಂತೆ ಮಾನ್ಯ ನ್ಯಾಯಾಲಯ ಆದೇಶ ಮಾಡಿದೆ ಎಂದರೆ ಸರಿ. ನಿಪಿ-19 ರಂತೆ ನ್ಯಾಯಾಲಯಕ್ಕೆ ಜಾಮೀನು ನೀಡಿ ಅಪಘಾತಪಡಿಸಿದ ವಾಹನವನ್ನು ನನ್ನ ವಶಕ್ಕೆ ಪಡೆದಿದ್ದೇನೆ ಎಂದರೆ ಸರಿ. ನಿಪಿ-20 ರಲ್ಲಿ ನನ್ನ ಸಹಿಗಳು ಇರುತ್ತವೆ ಎಂದರೆ ಸರಿ. ನಿಪಿ-24 ಮತ್ತು 25 ರಲ್ಲೂ ಕೂಡಾ ನನ್ನ ಸಹಿಗಳು ಇರುತ್ತವೆ ಎಂದರೆ ಸರಿ. ನಿಪಿ-25 ನಾನು ವಾಹನವನ್ನು ಬಿಡುಗಡೆ ಮಾಡಿಕೊಂಡ ಕಾಲಕ್ಕೆ ಮಾಡಿದ ದಾಖಲೆ ಎಂದರೆ ಸರಿ.

ಅಪಘಾತಪಡಿಸಿದ ವಾಹನವನ್ನು ನಾನು 3 ನೇ ಎದುರುದಾರರಿಗೆ ಅಗ್ರಿಮೆಂಟ್ ಮಾಡಿಕೊಟ್ಟು ಮಾರಾಟ ಮಾಡಿದ್ದೇನೆ ಮತ್ತು ಸದರಿ ವಾಹನದ ಸ್ವಾಧೀನತೆಯನ್ನು ಅವರಿಗೆ ಬಿಟ್ಟುಕೊಟ್ಟಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಅಗ್ರಿಮೆಂಟನ್ನು 3 ನೇ ಎದುರುದಾರರಿಗೆ

ವಾಹನ ಮಾರಾಟ ಮಾಡುವ ಸಂಬಂಧ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾಹನದ ಸ್ವಾಧೀನತೆಯನ್ನು 3 ನೇ ಎದುರುದಾರರಿಗೆ ಬಿಟ್ಟುಕೊಟ್ಟಿದ್ದೇನೆ ಎಂದು ಹೇಳುವ ಯಾವುದೇ ಕರಾರು ಪತ್ರದ ಅಸಲು ಪ್ರತಿ 3 ನೇ ಎದುರುದಾರರ ಹತ್ತಿರ ಇರುವುದಿಲ್ಲ ಎಂದರೆ ಸಾಕ್ಷಿಯು ಅವರಿಗೆ ನಾನು ಅಸಲು ದಾಖಲೆಯನ್ನು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಜವಾಬ್ದಾರಿ ಮತ್ತು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ 3 ನೇ ಎದುರುದಾರರಿಗೆ ವಾಹನ ಮಾರಾಟ ಮತ್ತು ಅದರ ಸ್ವಾಧೀನತೆಯನ್ನು ಬಿಟ್ಟುಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನದ ನೊಂದಣಿ ಮಾಲೀಕ ನಾನೇ ಎಂದರೆ ಸರಿ.

ಪಾಟೀ ಸವಾಲು: 4 ನೇ ಎದುರುದಾರರ ಪರ: ಶ್ರೀ ಯು ಎಸ್ ಎನ್ ವಕೀಲರಿಂದ:

ಅಪಘಾತ ಆದ ಸಮಯದಲ್ಲಿ ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ-21-ಬಿ-6482 ರ ಆರ್ ಸಿ ಮಾಲೀಕ ನಾನೇ ಎಂದರೆ ಸರಿ. ಸದರಿ ವಾಹನದ ಇನ್ಸ್ಯೂರೆನ್ಸ್ ನ್ನು 3 ನೇ ಎದುರುದಾರರು ಕಟ್ಟಿರುತ್ತಾರೆ. ಅವರು ವಿಮೆಯ ಹಣವನ್ನು ಯಾವ ರೀತಿ ಜಮಾ ಮಾಡಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಚೆಕ್ ಬೌನ್ಸ್ ಆದ ಸಂಬಂಧ 4 ನೇ ಎದುರುದಾರರಿಂದ ನನಗೆ ನೋಟೀಸ್ ಬಂದ ಬಗ್ಗೆ ನೆನಪಿಲ್ಲ. ಈಶ್ವರಮಂಗಲದ ವಿಜಯ ಬ್ಯಾಂಕ್ ನಲ್ಲಿ ನನಗೆ ಯಾವುದೇ ಖಾತೆ ಇಲ್ಲ. ಪ್ರೀಮಿಯ ಹಣಕ್ಕೆ ಸಂಬಂಧಿಸಿದಂತೆ ನೀಡಿದ್ದ ಚೆಕ್ ಬೌನ್ಸ್ ಆದ ಕಾರಣ 4 ನೇ ಎದುರುದಾರರು ನನಗೆ ನೋಟೀಸ್ ನೀಡಿ ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ-21-ಬಿ-6482 ರ ವಿಮೆ ಪಾಲಿಸಿಯನ್ನು ರದ್ದುಗೊಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚೆಕ್ ಬೌನ್ಸ್ ಆದ ಬಗ್ಗೆ ಹಾಗೂ ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ-21-ಬಿ-6482 ರ ವಿಮೆ ಪಾಲಿಸಿಯನ್ನು ರದ್ದುಗೊಳಿಸಿರುವ ಸಂಬಂಧ ನನಗೆ ನೋಟೀಸುಗಳನ್ನು 4 ನೇ ಎದುರುದಾರರು ನೀಡಿರುವುದು ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆದ ಸಮಯದಲ್ಲಿ ನನ್ನ ಮಾಲೀಕತ್ವದ ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ-21-ಬಿ-6482 ರಕ್ಕೆ

ಸಂಬಂಧಿಸಿದಂತೆ ವಿಮೆ ಚಾಲ್ತಿಯಲ್ಲಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ-**21**-ಬಿ-**6482** ರ ಮಾಲೀಕ ನಾನೇ ಆಗಿರುವ ಕಾರಣ ಅರ್ಜಿದಾರರಿಗೆ ಅಪಘಾತ ಸಂಬಂಧಿತ ಪರಿಹಾರದ ಹಣವನ್ನು ನೀಡಲು ಭಾದ್ಯನಿದ್ದೇನೆ ಎಂದರೆ ಸುಳ್ಳು. ನಾನು ಸತ್ಯಾಂಶಗಳನ್ನು ಮರೆಮಾಚಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **4** ನೇ ಎದುರುದಾರರು ಅರ್ಜಿದಾರರಿಗೆ ಪರಿಹಾರ ಹಣವನ್ನು ನೀಡಲು ಭಾದ್ಯರಲ್ಲ ಎಂದರೆ ಸರಿಯಲ್ಲ. ಅಬ್ದುಲ್ ಜಬ್ಬಾರ್ ಬಿನ್ ಅಬೂಬಕ್ಕರ್ , ಜಯನಗರ ಮನೆ , ಸುಳ್ಯ ಎಂದರೆ ನಾನೇ ಎಂದರೆ ಸರಿ. ಸದರಿ ವಿಳಾಸಕ್ಕೆ ಕಳುಹಿಸುವ ಎಲ್ಲಾ ಪತ್ರಗಳು ನನಗೆ ತಲುಪುತ್ತವೆ ಎಂದರೆ ಸರಿ.

ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಎ ಡಿ ಆರ್ ವಕೀಲರಿಂದಃ

ನಾನು ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ-**21**-ಬಿ-**6482** ವಾಹನವನ್ನು **2017** ರಲ್ಲಿ ಖರೀದಿ ಮಾಡಿದ್ದೇನೆ. ಖರೀದಿ ಮಾಡಿದ ಸಮಯದಲ್ಲಿ ನಾನೇ ಅದರ ಮಾಲೀಕ ಎಂದರೆ ಸರಿ. ಅಕ್ಟೋಬರ್ **19, 2017** ರಲ್ಲಿ ನಾನು **3** ನೇ ಎದುರುದಾರರಿಗೆ ಸದರಿ ವಾಹನವನ್ನು ಮಾರಾಟ ಮಾಡಿದ್ದೇನೆ. ಅಕ್ಟೋಬರ್ **19, 2017** ರಿಂದ ಈದಿನದವರೆಗೂ ಕೂಡಾ ನಾನು ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ-**21**-ಬಿ-**6482** ರ ಮಾಲೀಕ ಮತ್ತು ಸ್ವಾಧೀನದಾರ ಅಲ್ಲ ಎಂದರೆ ಸರಿ. ಅಕ್ಟೋಬರ್ **19, 2017** ರಲ್ಲಿ ನಾನು **3** ನೇ ಎದುರುದಾರರಿಗೆ ಸದರಿ ವಾಹನವನ್ನು ಕರಾರು ಪತ್ರದ ಮೂಲಕ ಮಾರಾಟ ಮಾಡಿದ್ದೇನೆ. ಸದರಿ ಕರಾರು ಪತ್ರವನ್ನು ಸುಳ್ಯದ ವಕೀಲರಾದ ಕೃಷ್ಣಮೂರ್ತಿ ಎನ್ನುವವರ ಸಮಕ್ಷಮ ಮಾಡಲಾಗಿದೆ. ಸದರಿ ಕರಾರು ಪತ್ರದ ಮೂಲಪ್ರತಿ **3** ನೇ ಎದುರುದಾರರ ಹತ್ತಿರ ಇರುತ್ತದೆ. ಅದಕ್ಕೆ ಸಂಬಂಧಿಸಿದ ಜೆರಾಕ್ಸ್ ಪ್ರತಿಯನ್ನು **3** ನೇ ಎದುರುದಾರರು ನನಗೆ ನೀಡಿರುತ್ತಾರೆ. ದಿ. **19-10-2017** ರಿಂದ ಇಲ್ಲಿಯತನಕ ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ-**21**-ಬಿ-**6482** ಕ್ಕೆ ಸಂಬಂಧಿಸಿದ ವಿಮೆಯನ್ನು ನಾನು ಪಾವತಿ ಮಾಡುತ್ತಿಲ್ಲ. ಅದನ್ನು **3** ನೇ ಎದುರುದಾರರು ನವೀಕರಿಸುತ್ತಾ ಬಂದಿರುತ್ತಾರೆ. **3** ನೇ ಎದುರುದಾರರ ಮನೆ

ಈಶ್ವರಮಂಗಲದಲ್ಲಿ ಇರುತ್ತದೆ. ನಿಪಿ**-16** ನ್ನು ಚೆಕ್ ಮೂಲಕ ಪ್ರೀಮಿಯಂ ಪಾವತಿ ಮಾಡಿ ಕಟಾವು ಇನ್ಶೂರೆನ್ಸ್ ಏಜಂಟ್ ರವರಿಂದ ನಾನು ವಿಮೆ ಮಾಡಿಸಿಲ್ಲ. ಸದರಿ ವಿಮೆಯನ್ನು **3** ನೇ ಎದುರುದಾರರು ಮಾಡಿಸಿದ್ದಾರೆ. ಮೇಲೆ ತಿಳಿಸಿದ ಪ್ರೀಮಿಯಂ ಹಣ ನಮೂದಿಸಿದ್ದ ಚೆಕ್ಕನ್ನು ಇನ್ಶೂರೆನ್ಸ್ ಕಂಪನಿಯವರಿಗೆ **3** ನೇ ಎದುರುದಾರರು ನೀಡಿದ್ದಾರೆ. ನಿಪಿ**-16** ರಂತೆ ಇಲ್ಲಿಯತನಕವೂ ಕೂಡಾ ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ**-21-**ಬಿ**-6482** ವಾಹನದ ವಿಮೆ ಚಾಲ್ತಿಯಲ್ಲಿದೆ. **2** ನೇ ಎದುರುದಾರರು ನನ್ನ ವಾಹನದ ಚಾಲಕನಲ್ಲ. ದಿ**.19-10-2017** ರಿಂದ ಇಲ್ಲಿಯತನಕ ನಾನು **2** ನೇ ಎದುರುದಾರರಿಗೆ ಚಾಲಕ ಎಂದು ವೇತನ ನೀಡಿಲ್ಲ. **3** ನೇ ಎದುರುದಾರರಿಗೆ ಮಾರಾಟ ಮಾಡಿದ ವಾಹನ ಅಕಸ್ಮಾತ್ ಅಪಘಾತವಾದರೆ ಅದನ್ನು ಬಿಡಿಸಿಕೊಡಬೇಕು ಎಂದು **3** ನೇ ಎದುರುದಾರರೊಂದಿಗೆ ಕರಾರು ಆಗಿತ್ತು. 3 ನೇ ಎದುರುದಾರರ ಸ್ವಾದೀನದಲ್ಲಿರುವ ಟಾಟಾ ಏಸ್ ವಾಹನ ನೊಂದಣಿ ಸಂ. ಕೆಎ-21-ಬಿ-6482 ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ನನ್ನ ತಕರಾರು ಇಲ್ಲ. ಅರ್ಜಿದಾರರಿಗೆ ಪರಿಹಾರದ ಮೊತ್ತವನ್ನು ಪಾವತಿ ಮಾಡಲು ನನ್ನನ್ನೂ ಸೇರಿಸಿ ಇತರೆ ಎದುರುದಾರರು ಭಾದ್ಯರಾಗಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು.